**<u>ನನ್ನ ಸಂತೋಷಕ್ಕೆ ಕಾರಣ</u>**

ನನ್ನ ಸಂತೋಷಕ್ಕೆ ಕಾರಣ ನೀನೇ ಯೇಸಯ್ಯ
ನೀನೇ ಯೇಸಯ್ಯ ನನ್ನ ಆಧಾರ ನೀನೇ
ನನ್ ಸಮೃದ್ಧಿಗೆ ಕಾರಣ ನೀನೇ ಯೇಸಯ್ಯ
ನೀನೇ ಯೇಸಯ್ಯ ನನ್ ಐಶ್ವರ್ಯ ನೀನೇ

ನಿನ್ ರಕ್ತಕೋಟೆಯಲ್ಲಿ ನನ್ನ ಮರೆಮಾಡಿದೆ
ಮರೆಮಾಡಿದೆ ದೇವಾ ಕಾಪಾಡಿದೆ
ನಿನ್ ಶಿಲುಬೆಯ ನೆರಳಲ್ಲಿ ಮರೆಮಾಡಿದೆ
ಮರೆಮಾಡಿದೆ ದೇವಾ ಕಾಪಾಡಿದೆ

ಸ್ತೋತ್ರ ಸ್ತೋತ್ರ ಯೇಸಯ್ಯ
ಸ್ತೋತ್ರ ಸ್ತೋತ್ರ ಯೇಸಯ್ಯ

ಗಾಯ ಪಟ್ಟು ನಿಂತಾಗ ಕಣ್ಣೀರಲ್ಲಿ ಇರುವಾಗ
ನನ್ನನ್ನು ಹುಡುಕಿ ಬಂದೆ
ಬೇಟೆಗಾರನ ಬಲೆಯಿಂದಲು
ಮರಣಕರ ವ್ಯಾದಿಯಿಂದಲೂ
ತಪ್ಪಿಸಿದವನು ನೀನೇ ಯೇಸಯ್ಯ
ಕಾಪಡಿದವನು ನೀನೇ ಯೇಸಯ್ಯ

ಸಾವಿರಾರು ತಲೆಯವರೆಗೂ ನನ್ನ ಸಂತತಿಯನ್ನು
ಕಾಯುವ ದೇವಾ ನೀನೇ
ನಿನ್ನ ಮರೆಹೊಕ್ಕಿರುವ ನನ್ನ ಕುಟುಂಬವು
ನಿಜವಾದ ಭಾಗ್ಯವಂತರು
ನಿನ್ನ ಆರಾಧಿಸುವ ನಾವೇ ಧನ್ಯರು
ನಿನ್ನ ಸೇವೆ ಮಾಡುವ ನಾವೇ ಧನ್ಯರು